ಮರಳಿ ಬಿಟ್ಟಿದ್ದರು. ಮೃತ್ಯುವಿನ ಹೆಂಡತಿ ಎಂದು ನಗೆಸಾರಕ್ಕೆ ಊರವರು ಆಡುತ್ತಿದ್ದ ಮಾತುಗಳು ನಿಜವಾಗಿ ಮೃತ್ಯುವಿನ ಹೆಂಡತಿಯಾಗಿದ್ದಳು ಗೌರ.

ಲಗ್ಣ ಮಾಡಿ ಅಪ್ಪಾ–ಮಗಳು ಮೃತ್ಯೂನ ಸಂಸಾರ ಆರಂಭವಾಯಿತೆಂದರು. "ಸ್ವಾಮಿ ಉಣ್ಣು ಬಾಪ್ಪ, ಸ್ವಾಮಿ ತಿನ್ನು ಬಾಪ್ಪಾ. ಲೇಟಾಯ್ತು ಮನೀಕಾ ಹೋಗಪ್ಪಾ ಸ್ವಾಮಿ" ನಿತ್ಯವೂ ಮೃತ್ಯುವನ್ನು ಅಪಾರ ಅಕ್ಕರೆಯಿಂದಲೇ ಸಲಹುತ್ತಿದ್ದ ಪಾರೋತಕ್ಕನ ಧ್ವನಿಯಲ್ಲೀಗ ಬೇರೆ ಬಗೆಯ ಸೂಚನೆಗಳೇ ಕಾಣುತ್ತವೆ. ಅವನು ಹೋದ ಮರುಕ್ಷಣವೇ ಗೌರಳತ್ತ ನೋಡುತ್ತಾಳೆ; "ಹೋಗು ಕೂಸು. ಉಳದ್ ಕೆಲ್ಸ ನಾ ಮಾಡಕಂತೀನಿ" ಮಗಳನ್ನು ಕಳುಹಿಸುತ್ತಾಳೆ. ಕೋಣೆಯ ಕದ ಹಾಕಿಕೊಂಡುಬಿಟ್ಟರೆ ಹಜಾರದಲ್ಲಿ ಮೈಚೆಲ್ಲಿ ಮಲಗುವ ಪಾರೋತಕ್ಕನಿಗೆ ಆಕಾಶದಲ್ಲಿನ ಚಿಕ್ಕಿ ಚಂದ್ರಮರು ಮಾತ್ರ ಕಾಣುತ್ತಾರೆ. ಹೊತ್ತಾರೆ ಗೌರಿ ಏಳುತ್ತಿದ್ದಂತೆಯೇ ಮಗಳ ಮೈ ಮೋರೆಗಳ ನೋಡುವುದೇ ಅವಳ ದೊಡ್ಡ ಕಾರ್ಯ. "ಇದ್ಯಾಕವ್ವ ಹುಟ್ದಾಗಿಂದ ನೋಡೇ ಇಲ್ಲ ಅನ್ನಂಗೆ ನನ್ನ ನೋಡ್ತಯಿ. ಹೋಗತ್ತಗೆ" ಅವ್ವನ ನೋಟವ ಸೈಸಲಾರದೆ ಆ ಹೆಣ್ಣು ಅವ್ವನನ್ನೇ ರೇಗುತ್ತದೆ.

ಅವ್ವನನ್ನಲ್ಲದೆ ಆ ಹೆಣ್ಣು ಇನ್ನಾರನ್ನಾದರೂ ಯಾಕೆ ರೇಗೀತು? ಕಣ್ಣು ಬಿಟ್ಟು ಬುದ್ಧಿ ತಿಳಿದಾಗಿನಿಂದ ಕಂಡದ್ದು, ಅನುಭೋಗಿಸಿದ್ದು ಆಶ್ರಯದ ಬದುಕು. ಪಡೆದುಕೊಂಡ ಆಶ್ರಯಕ್ಕೆ ಋಣ ಸಂದಾಯವೋ ಎಂಬಂತೆ ಅವ್ವ ಆ ಹೆಣ್ಣನ್ನೇ ಕಡೆಗಣಿಸಿ ತಮ್ಮ ಮತ್ತು ಅಪ್ಪನನ್ನು ಜತನವಾಗಿ ಸಲಹುತ್ತಾ ಬಂದಿದ್ದಳು. ಅವರಿದ್ದರೆ ತಾವು ಎಂಬುದವಳ ಮನಃಸ್ಥಿತಿ. ಎಷ್ಟೇ ಆದರೂ ಅದು ಅವಳ ತವರು. ಆದರೆ ಈ ಹೆಣ್ಣಿಗೆ ಅಪ್ಪ, ತವರು ಎಂಬುದೆಲ್ಲ ಕನಸಿನ ಮಾತು. ಅವ್ವನೇ ತನ್ನವಳಾಗಲು ಹಿಂಜರಿದು ನಿಲ್ಲುತ್ತಾಳೆ ಎಂದರೆ ಆ ಹೆಣ್ಣಿನ ದುಃಖ ಆಲಿಸುವವರು ಯಾರು? ಅದು ಬರುಬರುತ್ತಾ ಮೌನಿಯಾಗತೊಡಗಿತ್ತು. ಓದು ಬರಹವ ಹಚ್ಚಿಕೊಂಡಿತ್ತು. ಶಾಲೆಯಲ್ಲಾದರೂ ಉಸಿರಾಡಲು ತೊಡಗಿತ್ತು. ತಮ್ಮನೇ ಕಾರಣವಾಗಿ ಅವ್ವ ಅವಳನ್ನು ಓದಿನಿಂದ

